# ‘ಮಾದರಿ’ ಚಿನ್ನದ ಗಣಿ

ಚಿನ್ನದ ತವರೂರಾಗಿದ್ದ ಕೆ.ಜಿ.ಎಫ್.ನಲ್ಲಿ ಗಣಿಗಾರಿಕೆ ನಿಂತು ವರ್ಷಗಳು ಉರುಳಿವೆ. ಅದರ ಪಳೆಯುಳಿಕೆಗಳು ಇಂದೂ ಕಾಣಸಿಗುತ್ತಿವೆ.

ಟರ್ನ್ ಟೇಬಲ್




■ ಚಿತ್ರ-ಬರಹ:
**ಮಂಜುನಾಥ ಡಿ.ಎಸ್.**

**ಕ**ನ್ನಡ ನಾಡಿನ ಚಿನ್ನದ ಬೀಡು ಕೋಲಾರ. ಭೂತಳದಲ್ಲಿ ಸುರಂಗ ಕೊರೆದು, ಅದಿರನ್ನು ಹೊರ ತಂದು, ಅದರಿಂದ ಚಿನ್ನ ಉತ್ಪಾದಿಸುವ ಕಾರ್ಯ ಇಲ್ಲಿ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿತ್ತು. ಸ್ವಾತಂತ್ರ್ಯಾನಂತರ ಈ ಉತ್ಪಾದನೆಯ ಹೊಣೆ ಹೊತ್ತಿದ್ದ ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್ ಈ ಶತಮಾನದ ಆರಂಭದಲ್ಲಿ ಇತಿಹಾಸದ ಪುಟಗಳಲ್ಲಿ ಲೀನವಾಗಿ ಹೋಯಿತು.

ಹಿಂದೊಮ್ಮೆ ಚಿನ್ನದ ತವರೂರಾಗಿದ್ದ ಕೆ.ಜಿ.ಎಫ್.ನಲ್ಲಿ ಗಣಿಗಾರಿಕೆ ನಿಂತು ವರ್ಷಗಳು ಉರುಳಿವೆ. ಅದರ ಪಳೆಯುಳಿಕೆಗಳು ಇಂದು ಕಾಣಸಿಗುತ್ತಿವೆ. ಆದರೆ, ಕಾಲಚಕ್ರ ಉರುಳಿದಂತೆ ಈ ಪಳೆಯುಳಿಕೆಗಳು ಮರೆಯಾಗಬಹುದು. ಅಲ್ಲದೆ ಮುಚ್ಚಿರುವ ಗಣಿಗಳೊಳಗೆ ಇಳಿದು ಅದು ಹೇಗೆ ಕಾರ್ಯನಿರ್ವಹಿಸುತ್ತಿತ್ತು ಎಂಬುದನ್ನು ಅರಿಯುವ ಅವಕಾಶ ದೊರಕಲಾರದು. ಕೆ.ಜಿ.ಎಫ್.ನ ಡಾ.ಟಿ.ತಿಮ್ಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತನ್ನ ಆವರಣದಲ್ಲಿ ನಿರ್ಮಿಸಿರುವ ಗಣಿಯ ಮಾದರಿ ಈ ಕೊರತೆಯನ್ನು ಕೆಲ ಮಟ್ಟಿಗೆ ತುಂಬಲಿದೆ.

ಗಣಿಯೊಳಗಿನ ಆಗುಹೋಗುಗಳನ್ನು ತಿಳಿಯಪಡಿಸಲು ಗಂಟೆಯ ಶಬ್ದಗಳನ್ನು ಬಳಸುತ್ತಿದ್ದರು. ಈ ಸಂಕೇತಗಳು ಏನನ್ನು ಸೂಚಿಸುತ್ತವೆ ಎಂಬುದನ್ನು ದಾಖಲಿಸಿರುವ ಫಲಕ ಗಮನ ಸೆಳೆಯುತ್ತದೆ. ಪುಟ್ಟ ಮಾದರಿಯಾದ ಇದು ಗಣಿಗಾರಿಕೆಯ ಕಿರು ಪರಿಚಯ ನೀಡುತ್ತದೆ. ವೀಕ್ಷಕರಿಗೆ ಕುತೂಹಲ ತಣಿಸುವ ಇದು ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ನೆರವಾಗುತ್ತದೆ. ■




ರೋಪ್ ಲ್ಯಾಡರ್




ಬೆಲ್ ಸಿಗ್ನಲ್‌ಗಳನ್ನು ಸೂಚಿಸುವ ಫಲಕ




ಮೈನ್ ಕಾರ್